

ಅದಕ್ಕವರು, ‘ಯಾಕ್ರೀ ಹಂಗಂತೀರಾ ದೇವಸ್ಥಾನದಲ್ಲಿ ಮಾಡ್ಸಕೆ ನಾವೇನ್ ಗತಿಗೆಟ್ಟಿದಿವೇನ್ರೀ? ನನ್ನ ಮಗ ಚಿಟಿಕೆ ಹೊಡೆದ್ರೆ ಐದು ಸಾವಿರ ಜನ ಸೇರ್‍ತಾರೆ’ ಅಂದ್ರು. ಒಂದು ಕ್ಷಣ ಯೋಚಿಸಿದೆ ಅವರ ಕಷ್ಟ ಹೇಳಿಕೊಳ್ಳಲು ವಾರಕ್ಕೆ ಎರಡು ದಿನ ಮನೆಗೆ ಬರುತ್ತಿದ್ದರು. ಪ್ರತಿದಿನ ಜಗಳ ಗಂಡ ಮಕ್ಕಳೊಂದಿಗೆ. ಈರುಳ್ಳಿ, ರಾಗಿ ಹಿಟ್ಟು, ತೆಂಗಿನಕಾಯಿ, ಹಾಲು, ಕಾಫಿಪುಡಿ ಯಾವಾಗಲೂ ಕೇಳುತ್ತಿದ್ದರು. ಮಗನಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ ವಯಸ್ಸು ನಲವತ್ತಾಯಿತು. ಕೇಳಿದವರಿಗೆ ಏನು ಹೇಳುವುದು ಮುಖ ತೋರ್ಸಕೆ ನಾಚಿಕೆಯಾಗತ್ತೆ, ನಿಮ್ಮ ಹತ್ರ ಮಾತ್ರ ನನ್ನ ಕಷ್ಟ ಹೇಳ್ಕೋತೀನಿ ಅಂತೆಲ್ಲಾ ಹೇಳಿ ಕಣ್ಣೀರು ಹಾಕಿದಾಗ, ‘ಅಮ್ಮ ಸಮಾಧಾನ ಮಾಡ್ಕೊಳಿ ಎಲ್ಲಾ ಸರಿಯಾಗುತ್ತೆ’ ಅಂದಿದ್ದು ಈಗ ನೆನಪಾಯಿತು. ಬಣ್ಣ ಬಯಲಾಗುವುದೆಂದರೆ ಇದೇ ಇರಬೇಕು ಅಂದುಕೊಂಡೆ. ಬಗೆಬಗೆಯ ಸೌಂದರ್ಯ ಸಾಧನಗಳನ್ನು ಬಳಸಿ ಮೈಬಣ್ಣವನ್ನು ಬದಲಾಯಿಸಿಕೊಳ್ಳುವಷ್ಟೇ ಸುಲಭವಾಗಿ ಮನಸ್ಸಿನ ಬಣ್ಣವನ್ನು ಬದಲಾಯಿಸಿ ಕೊಂಡು ಅದನ್ನು ಬಯಲಾಗಿಸುವುದು ಮಾನ-ಮರ್ಯಾದೆ, ನೈತಿಕತೆ, ಮೌಲ್ಯ, ಮನುಷ್ಯತ್ವಗಳನ್ನು ಗಾಳಿಗೆ ತೂರಿ ನಿರ್ಭಯವಾಗಿ ಸಮಾಜಕ್ಕೆ ಮುಖ ತೋರಿಸುತ್ತಾ ಬದುಕುವ ಪರಿಯೇ ಬಣ್ಣ ಬಯಲಾಗುವುದು.

ಇನ್ನು ಹೊರ ಪ್ರಪಂಚವೇ ಬೇರೆ, ಊಹಿಸಲು ಸಾಧ್ಯವಿಲ್ಲ ಪರಿಹಾರ ಕಾಣದ್ದೇನೋ ಎಂಬಂತಾಗಿದೆ. ಬೃಹತ್ ಭ್ರೂಣಹತ್ಯೆ ಜಾಲ ಬಯಲಾಯಿತು ಎಂಬ ಸುದ್ದಿ ಹರಡುತ್ತದೆ. ಆದರೆ, ಅದಕ್ಕೆ ಶಾಶ್ವತ ಪರಿಹಾರ ಸಿಕ್ಕಿತೆ? ಇಲ್ಲ. ವಿವಿಧ ಕ್ಷೇತ್ರಗಳ ಸಂಘ ಸಂಸ್ಥೆಗಳ ಕೆಲವು ಮಠಮಾನ್ಯ, ಸಾಧು- ಸನ್ಯಾಸಿಗಳ, ರಾಜಕೀಯ ವ್ಯಕ್ತಿಗಳ, ದೊಡ್ಡದೊಡ್ಡ ವಿದ್ಯಾವಂತರ, ಅಧಿಕಾರಿಗಳ ವೃತ್ತಿಗಳ ಹದಿಹರೆಯದವರ ಹಣವಂತರ ಬಣ್ಣ ಬಯಲಾಗುತ್ತಲೇ ಇರುತ್ತದೆ.



ಹಿರಿಯರು ಹೇಳುತ್ತಾರೆ ತಂಪಿನ ಹೊತ್ತಿನಲ್ಲಿ ಶರಣರನ್ನು ನೆನೆಯಿರಿ ಎಂದು. ಏಕೆಂದರೆ ಅವರ ಮನಸ್ಸು ಪಾರದರ್ಶಕ ಬದುಕು ಪಾರಮಾರ್ಥಿಕ. ಇವರ ಪ್ರಕಾರ ಬಯಲಾಗುವುದು ಎಂದರೆ ಪರಿಪೂರ್ಣವಾಗಿರುವುದು. ಶೂನ್ಯವಾಗುವುದು ಎಂದರ್ಥ. ಮಹಾತ್ಮ ಗಾಂಧೀಜಿಯವರು. ತಮ್ಮ ಆತ್ಮಚರಿತ್ರೆಯಲ್ಲಿ ಯಾವೊಂದನ್ನು ಬಚ್ಚಿಡದೇ ಎಲ್ಲವನ್ನೂ ಬಯಲುಗೊಳಿಸಿದ ಹಾಗೆ ಶರಣರು ತಮ್ಮ ಒಳಹೊರಗನ್ನೆಲ್ಲಾ ತಾವೇ ವಿಶ್ಲೇಷಿಸಿಕೊಂಡು ಬಹಿರಂಗಪಡಿಸಿದ್ದಾರೆ. ಶರಣರಿಗೆ ಬರೀ ತಾವಷ್ಟೇ ಆತ್ಮವಂಚಕರಾಗದಿದ್ದರೆ ಸಾಲದು, ಬೇರೆಯವರೂ ಸಹ ಆತ್ಮವಂಚಕರಾಗಬಾರದು ಎಂಬ ಹದುಳ ಆಶಯ ಅವರದು.

ನಮ್ಮ ವಚನಕಾರರು ಪ್ರದರ್ಶನ ಪ್ರಧಾನ ಬದುಕನ್ನು ಬದುಕಲಿಲ್ಲ. ಪರಿಶುದ್ಧ ಬದುಕನ್ನು ಬದುಕಿದರು. ಅದೂ ಅಲ್ಲದೆ ಅವರು ‘ಆಡದೇ ಮಾಡುವವರು ರೂಢಿಯೊಳಗುತ್ತಮರು’ ಎಂಬ ಸಾತ್ವಿಕ ಪರಂಪರೆಗೆ ಸೇರಿದವರು. ಆತ್ಮಸಾಕ್ಷಿಯನ್ನು ಗೌರವಿಸುವ ಸತ್ವಪರಂಪರೆಗೆ ಸೇರಿದವರು. ನಾವುಗಳು ನಮ್ಮಗಳ ಆತ್ಮಸಾಕ್ಷಿ ಬಾಯಿ ಬಿಡುವುದಕ್ಕೆ ಮತ್ತದು ಮಾತನಾಡುವುದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ ಬಹುಶಃ ನಮ್ಮಗಳ ಆತ್ಮಸಾಕ್ಷಿ ಮೂಕವಾಯಿತೇ? ಹಾಗಾಗುವುದು ಬೇಡ. ಎಂಬ ಆಶಯದೊಂದಿಗೆ, ಅಲ್ಲಮಪ್ರಭುಗಳ

**‘ಬಯಲು ಬಯಲನೆ ಬಿತ್ತಿ**
**ಬಯಲು ಬಯಲನೆ ಬೆಳೆದು**
**ಬಯಲು ಬಯಲಾಗಿ**
**ಬಯಲಾಯಿತಯ್ಯಾ**
**ಬಯಲ ಜೀವನ ಬಯಲಭಾವನೆ**
**ಬಯಲು ಬಯಲಾಗಿ ಬಯಲಾಯಿತಯ್ಯಾ**
**ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು**
**ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರಾ’**

ಎಂಬ ಸಾಲುಗಳೊಂದಿಗೆ ತಾವೇ ಬಯಲೆಂದು ಪರಿಭಾವಿಸೋಣ.

●